ಹಾಗೂ ಈ ಪ್ರತಿಮೆಯನ್ನು ಎಲ್ಲಿ ನಿರ್ಮಿಸಲಾಯಿತು ಮತ್ತು ಇದನ್ನು ನಿರ್ಮಿಸಿದ ಶಿಲ್ಪಿ ಯಾರು?

ಆ) ಸ್ವತಂತ್ರ್ಯ ಭಾರತದ ಪ್ರಥಮ ಪ್ರಧಾನಿಯಾದ ಪಂಡಿತ್ ಜವಾಹರ್ ಲಾಲ್ ನೆಹರೂರವರ ಪ್ರತಿಮೆಯನ್ನು ಅನಾವರಣಗೊಳಿಸಲು ಸ್ವತಂತ್ರ್ಯ ಭಾರತದ ರಾಷ್ಟ್ರಧ್ಯಕ್ಷರನ್ನೋ ಅಥವಾ ದೇಶದ ಪ್ರಧಾನ ಮಂತ್ರಿಗಳನ್ನು ಆಹ್ವಾನಿಸದೇ ರಾಜಕೀಯ ಪಕ್ಷದ ನಾಯಕರೊಬ್ಬರನ್ನು ಆಹ್ವಾನಿಸಿರುವುದರ ಔಚಿತ್ಯವೇನು?

ಇ) ಈ ಅನಾವರಣ ಕಾರ್ಯಕ್ರಮ ಸರ್ಕಾರಿ ಕಾರ್ಯಕ್ರಮವೆ?

ಈ) ಹಾಗಿದ್ದಲ್ಲಿ ಸರ್ಕಾರಕ್ಕೆ ಈ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚವೆಷ್ಟು?

ಉ) ಈ ಅನಾವರಣ ಮಾಡಿದ ಮುಖ್ಯ ಅತಿಥಿಗಳ ಭದ್ರತಾ ವ್ಯವಸ್ಥೆಯೂ ಸೇರಿದಂತೆ ಅವರ ಉಪಯೋಗಕ್ಕಾಗಿ ತಗುಲಿದ ವೆಚ್ಚವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ರೂ. 5,97, 650-00. ಈ ಪ್ರತಿಮೆಯನ್ನು ಶ್ರೀ ಆರ್. ಪಿ.ಕಾಮತ್, ಶಿಲ್ಪಕಾರ ನಂ. 461, ವೀರ ಸಾರ್ವಕರ್ ಮಾರ್ಗ, ಬೊಂಬಾಯಿ ಇವರು ತಯಾರಿಸಿರುತ್ತಾರೆ.

ಆ) ಭಾರತದ ಮೊದಲನೆ ಹಾಗೂ ಸುಪ್ರಸಿದ್ಧ ಪ್ರಧಾನಿಯವರಾಗಿದ್ದ ಭಾರತರತ್ನ ಪಂಡಿತ್ ಜವಾಹರ್ ಲಾಲ್ ನೆಹರುರವರು ವಿಧಾನ ಸೌಧ ಕಟ್ಟಡದ ತಳಹದಿ ಕಲ್ಲನ್ನು 1952ರಲ್ಲಿ ಹಾಕಿದ್ದರು. ಆದ್ದರಿಂದ ದಿವಂಗತರ ಒಬ್ಬರೇ ಮೊಮ್ಮಗನಾಗಿರುವ ಶ್ರೀ ರಾಜೀವ್ ಗಾಂಧಿ ಅವರ ಹಸ್ತದಲ್ಲಿ ಅನಾವರಣವನ್ನು ಮಾಡಿಸುವುದು ಯೋಗ್ಯವೆಂದು ಸರ್ಕಾರವು ನಿರ್ಣಯಿಸಿತು.

ಇ) ಹೌದು.

ಈ) ರೂ.2,91,000-00.

ಉ) 6,761-82.

1990-91ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮಾಸಪತ್ರಿಕೆಗಳು ಹಾಗೂ ವಾರಪತ್ರಿಕೆಗಳಿಗೆ ಸರ್ಕಾರ ನೀಡಿರುವ ಜಾಹೀರಾತುಗಾಗಿ ಹಣದ ಬಗ್ಗೆ

1085 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮಾಸಪತ್ರಿಕೆಗಳು ಹಾಗೂ ವಾರಪತ್ರಿಕೆಗಳಿಗೆ ಸರ್ಕಾರ ಎಷ್ಟು ಮೊತ್ತದ ಜಾಹೀರಾತನ್ನು ನೀಡಿದೆ?

ಆ) ಈ ಪತ್ರಿಕೆಗಳಿಗೆ ಜಾಹೀರಾತು ನೀಡುವಾಗ ಸರ್ಕಾರ ಪಾಲಿಸುವ ನೀತಿ ನಿಯಮಗಳೇನು?

ಇ) ರಾಜ್ಯದಲ್ಲಿನ ಕೆಲವು ಪ್ರಸಿದ್ಧ ವಾರಪತ್ರಿಕೆಗಳಿಗೆ ಜಾಹೀರಾತು ನೀಡುವುದರಲ್ಲಿ ತಾರತಮ್ಯ ತೋರುತ್ತಿರುವುದು ನಿಜವೇ?

ಈ) ಮುಂದಿನ ವರ್ಷಗಳಲ್ಲಿ ಜಾಹೀರಾತು ನೀಡುವಾಗ ಸರ್ಕಾರ ಈ ತಾರತಮ್ಯವನ್ನು ನಿವಾರಿಸಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರೂ. 5,44,676-00.

ಆ) ಸರ್ಕಾರಿ ಆಜ್ಞೆ ಎಚ್ ಡಿ 62 ಪಿಐಎ 79 ದಿನಾಂಕ 1-10-1980 ರಲ್ಲಿಯ ನಿಯಯಮಗಳ ಪ್ರಕಾರ ಜಾಹೀರಾತು ನೀಡಲಾಗುತ್ತಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿನ ಕಿರು ನೀರು ಯೋಜನೆಗಳಿಗೆ ವಿದ್ಯುತ್ ಸರಬರಾಜು

255 - ಶ್ರೀ ಬಿ. ಶಿವರಾಮು (ಗಂಡಸೀ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ಕಿರು ನೀರು ಯೋಜನೆಗೆ ಕನಿಷ್ಟ ದರವನ್ನು ಏಳು ವರ್ಷ ಸಂದಾಯ ಮಾಡಬೇಕೆಂದು ನಿಬಂಧನೆ ಹಾಕಿರುವುದು ನಿಜವೇ?

ಆ) ಹಾಗಿದ್ದಲ್ಲಿ ಬಾವಿಗಳು ಬತ್ತಿ ಯೋಜನೆ (ಸ್ಥಗಿತಗೊಂಡಲ್ಲಿ) ನಿಂತು ಹೋದ ಸಂದರ್ಭದಲ್ಲಿ ಮಂಡಲ ಪಂಚಾಯಿತಿಯವರೇ ಪಾವತಿ ಮಾಡಬೇಕಾಗುವುದೇ, ಹಾಗಿದ್ದಲ್ಲಿ ಸದರಿ ಹಣವನ್ನು ಪಾವತಿ ಮಾಡಲಾಗಿದೆಯೇ?

ಇ) ಗಂಡಸೀ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಬೇಡಿಕೆಯಿಂದಾಗಿ ಸ್ಥಗಿತಗೊಂಡಿರುವ ಕಿರು ನೀರು ಯೋಜನೆಗಳ ಸಂಖ್ಯೆ ಎಷ್ಟು?

ಈ) ಯೋಜನೆಗಳ ಕಾಮಗಾರಿ ಕೆಲಸ ಮುಗಿದ ತಕ್ಷಣ ವಿದ್ಯುತ್ ಪೂರೈಕೆಯನ್ನು ಕಲ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಮಂಡಳಿಯ ಸಪ್ಲೈ ರೆಗ್ಯೂಲೇಷನ್ 1988ರ ಪ್ರಕಾರ ಪ್ರಾರಂಭಿಕ ಒಪ್ಪಂದ ಅವಧಿಯು - ಎಲ್.ಟಿ ಸ್ಥಾವರಗಳಿಗೆ - 2 ವರ್ಷ ಮತ್ತು ಹೆಚ್.ಟಿ ಸ್ಥಾವರಗಳಿಗೆ - 5 ವರ್ಷ. ಈ ರೆಗ್ಯೂಲೇಷನ್‌ಗಳು 8-12-1988ರಿಂದ ಜಾರಿಯಲ್ಲಿದೆ. ಇದಕ್ಕೂ ಹಿಂದೆ ವಿದ್ಯುತ್ ಸಂಪರ್ಕ ಹೊಂದಿರುವ ಸ್ಥಾವರಗಳಿಗೆ ಕನಿಷ್ಟ ದರವನ್ನು ಏಳು ವರ್ಷಗಳ ಅವಧಿವರೆಗೆ ಸಂದಾಯ ಮಾಡಬೇಕನ್ನುವ ನಿಬಂಧನೆ ಇದೆ.

ಆ) ಪ್ರಾರಂಭಿಕ ಒಪ್ಪಂದದ ಅವಧಿಯಲ್ಲಿ ಕನಿಷ್ಟ ಹಣವನ್ನು ಪಾವತಿ ಮಾಡಬೇಕಾಗುವುದು. ಬಾವಿಗಳು ಬತ್ತಿ, ಯೋಜನೆಗಳು ಸ್ಥಗಿತಗೊಂಡಿರುವ ಸಂದರ್ಭದಲ್ಲಿ ಹಣ ಪಾವತಿ ಮಾಡಲಾಗಿದೆಯೇ ಅಥವಾ ಇಲ್ಲರೇ ಎಂಬ ವಿಷಯದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು ನಂತರ ಒದಗಿಸಲಾಗುವುದು.

ಇ) ಗಂಡಸೀ ಕ್ಷೇತ್ರದಲ್ಲಿ ಕಿರು ನೀರು ಯೋಜನೆಗಳಿಗೆ ವಿದ್ಯುಚ್ಛಕ್ತಿಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ : 28. ಇವುಗಳ ಪೈಕಿ 11ಕ್ಕೆ ವಿದ್ಯುತ್ ಒದಗಿಸಲಾಗಿದೆ. ಉಳಿದವುಗಳ ಪ್ರಗತಿಯು ವಿವಿಧ ಹಂತದಲ್ಲಿವೆ. ಈ ಕ್ಷೇತ್ರದಲ್ಲಿ ಯಾವ ಕಿರು ನೀರು ಯೋಜನೆಯು ವಿದ್ಯುತ್‌ಚ್ಛಕ್ತಿ ಪೂರೈಕೆಯಾಗದೇ ಸ್ಥಗಿತಗೊಂಡಿಲ್ಲ.

ಈ) ಕನಿಷ್ಟ ಅವಧಿಯಲ್ಲಿ ಆದ್ಯತೆ ಮೇರೆಗೆ ವಿದ್ಯುತ್ ಕಲ್ಪಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಗಂಡಸೀ ಕ್ಷೇತ್ರದ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಸೌಕರ್ಯ

250 - ಶ್ರೀ ಬಿ. ಶಿವರಾಮು (ಗಂಡಸೀ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಗಂಡಸೀ ಕ್ಷೇತ್ರದಲ್ಲಿ ಬೇಚರ್ ಗ್ರಾಮಗಳು ಸೇರಿ ವಿದ್ಯುತ್ ಒದಗಿಸದೆ ಇರುವ ಗ್ರಾಮಗಳ ಸಂಖ್ಯೆ ಎಷ್ಟು?